# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 641 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್.)<br>(ಶಿಕ್ಷಕರ ಕ್ಷೇತ್ರ ) |
| ಉತ್ತರಿಸಬೇಕಾದ ದಿನಾಂಕ | : | 13-12-2024 |
| ಉತ್ತರಿಸುವ ಸಚಿವರು | : | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ<br>ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪ್ರವರ್ಗ-1 ಗುಂಪಿಗೆ ಇತರೆ ಜಾತಿಗಳನ್ನು ಸೇರಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಯಾವ ಯಾವ ಜಾತಿಗಳನ್ನು ಸೇರಿಸಲಾಗುವುದು; ಸೇರಿಸಲು ಇರುವ ಮಾನದಂಡಗಳೇನು; | ಪ್ರವರ್ಗ-I ರ ಗುಂಪಿಗೆ ಸೇರಿಸುವಂತೆ ಸ್ವೀಕೃತವಾಗಿರುವ ಜಾತಿ / ಸಮುದಾಯಗಳ ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಿದೆ. ಯಾವುದೇ ಜಾತಿ / ಸಮುದಾಯಗಳನ್ನು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿಸಲು ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ವರದಿಯನ್ವಯ ಕ್ರಮವಹಿಸಲಾಗುವುದು. |
| ಆ) | ನ್ಯಾಯಮೂರ್ತಿ ಚಿನ್ನಪ್ಪ ರೆಡ್ಡಿ ಆಯೋಗದ ವರದಿ ಪ್ರಕಾರ ಬೇರೆ ಬೇರೆ ಗುಂಪಿನಲ್ಲಿದ್ದ ಜಾತಿಗಳನ್ನು ಪ್ರವರ್ಗ-1ಕ್ಕೆ ಸೇರಿಸಿದ್ದು, ಅದೇ ಪ್ರಕಾರವಾಗಿ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ನ್ಯಾಯಮೂರ್ತಿ ಚಿನ್ನಪ್ಪ ರೆಡ್ಡಿ ಆಯೋಗದ ವರದಿಯನ್ನಾಧರಿಸಿ ಹೊರಡಿಸಿದ ಸರ್ಕಾರದ ಆದೇಶದಲ್ಲಿ ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ಪ್ರವರ್ಗ-1ಕ್ಕೆ ಶೇ.4 ರಷ್ಟು ಮೀಸಲಾತಿಯನ್ನು ಕಲ್ಪಿಸಲಾಗಿರುತ್ತದೆ.<br><br>ಹಿಂದುಳಿದ ವರ್ಗಗಳ ಆಯೋಗಗಳು ನೀಡಿರುವ ವರದಿಯ ಆಧಾರದಂತೆ ಹಿಂದುಳಿದ ವರ್ಗಗಳನ್ನು ಗುರುತಿಸುವಾಗ ಸಾಮಾಜಿಕ ಹಾಗೂ ಶೈಕ್ಷಣಿಕ ಹಿಂದುಳಿದಿರುವಿಕೆಯನ್ನು ಪರಿಗಣಿಸಲಾಗುತ್ತದೆ. ಅದರಂತೆ, ಮೀಸಲಾತಿ ಪ್ರಮಾಣವನ್ನು ನಿಗದಿಪಡಿಸಲಾಗಿರುತ್ತದೆ.<br><br>ಪ್ರೊ.ರವಿವರ್ಮ ಕುಮಾರ್ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗವು ಸಲ್ಲಿಸಿದ ವಿಶೇಷ ಸಲಹೆಯಲ್ಲಿನ ಕೆನೆಪದರ ನೀತಿ ಹಾಗೂ ಕೆಲವು ಸಲಹೆಗಳನ್ನು ನೀಡಿರುತ್ತದೆ. ಅದರಂತೆ, ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000, ದಿನಾಂಕ:30.03.2002ರಲ್ಲಿ ಪ್ರವರ್ಗವಾರು ಶೈಕ್ಷಣಿಕ ಮತ್ತು ಉದ್ಯೋಗ ಮೀಸಲಾತಿಗಾಗಿ ಮೀಸಲಾತಿ ಪ್ರಮಾಣವನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿರುತ್ತದೆ ಹಾಗೂ ಪ್ರಸ್ತುತ ಸದರಿ ಆದೇಶವು ಜಾರಿಯಲ್ಲಿರುತ್ತದೆ. |

| ಪ್ರವರ್ಗ | ಮೀಸಲಾತಿ ಪ್ರಮಾಣ (ಶೇಕಡವಾರು) |
|---|---|
| ಪ್ರವರ್ಗ -I | 4 % |
| ಪ್ರವರ್ಗ -II (ಎ) | 15 % |
| ಪ್ರವರ್ಗ -II (ಬಿ) | 4 % |
| ಪ್ರವರ್ಗ -III (ಎ) | 4 % |
| ಪ್ರವರ್ಗ -III (ಬಿ) | 5 % |
| ಒಟ್ಟು | 32% |

...2..

| | | |
|---|---|---|
| ಇ) | ಬಂದಿದ್ದಲ್ಲಿ, ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಲು ಸರ್ಕಾರವು ತೆಗೆದುಕೊಂಡ ಕ್ರಮವೇನು; ಹಾಗೂ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಲು ಸರ್ಕಾರಕ್ಕೆ ಇರುವ ಅಡಚಣೆಗಳೇನು? | ಅನ್ವಯಿಸುವುದಿಲ್ಲ. |

**<u>ಸಂಖ್ಯೆ</u>:ಹಿಂವಕ 354 ಬಿಸಿಎ 2024**

**(ಶಿವರಾಜ.ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಚುಕ್ಕೆ ಗುರುತಿಲ್ಲದ ಪ್ರಶ್ನೆ 641ಕ್ಕೆ ಅನುಬಂಧ

## ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗಗಳಿಂದ ಪ್ರವರ್ಗ-1ಕ್ಕೆ ಸೇರಿಸಲು ಹಾಗೂ ಪ್ರವರ್ಗ-2ಎ ರಿಂದ ಪ್ರವರ್ಗ-1ಕ್ಕೆ ಬದಲಾವಣೆಗಾಗಿ ಸರ್ಕಾರಕ್ಕೆ ಸಲ್ಲಿಸಿದ ಸಲಹೆ/ಶಿಫಾರಸ್ಸುಗಳ ಪಟ್ಟಿ

| ಕ್ರ ಸಂ | ಆಯೋಗದ ಹೆಸರು | ಸಮುದಾಯಗಳು | ಷರಾ |
|---|---|---|---|
| 1 | ಶ್ರೀ ಸಿದ್ದಗಂಗಯ್ಯರವರ ನೇತೃತ್ವದ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮಧ್ಯಂತರ ವರದಿ-2005. | ಗೋಣಿಗ | - |
| 2 | ಡಾ.ಸಿ.ಎಸ್. ದ್ವಾರಕನಾಥ್ ನೇತೃತ್ವದ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ವಿಶೇಷ ವರದಿ-2010. | 1. ಸರಿಗೆ<br>2. ಆರ್ಯಕ್ಷತ್ರಿಯ<br>3. ಧನಗಾರ ಗೌಳಿ<br>4. ಗೌಲೆತ್ತಿನವರ<br>5. ಝುಂಡೇಕುರುಬರ್<br>6. ಕರಕರಮುಂಡಾ<br>7. ಕರಕರಮುಂಡಿ | - |
| | | 8. ಕಾಡು ಗೊಲ್ಲ<br>9. ಹಟ್ಟಿ ಗೊಲ್ಲ | ಕಾಡು ಗೊಲ್ಲ & ಹಟ್ಟಿ ಗೊಲ್ಲ ಸಮುದಾಯಗಳನ್ನು ಪ್ರವರ್ಗ-1 ಕ್ಕೆ ಸೇರಿಸಿ ಆದೇಶಿಸಲಾಗಿದೆ. |
| | | 1. ಜೆಟ್ಟಿ/ಜಟ್ಟಿ | ಪ್ರವರ್ಗ-2 (ಎ) ರಿಂದ ಪ್ರವರ್ಗ-1 ಕ್ಕೆ ಬದಲಾವಣೆ ಕುರಿತು. |
| 3 | ಶ್ರೀ ಎನ್. ಶಂಕ್ರಪ್ಪ ನೇತೃತ್ವದ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಪ್ರಥಮ ವರದಿ-2012 ಮತ್ತು ದ್ವಿತೀಯ ವರದಿ-2013. | 1. ಕಲಾಲ್<br>2. ಕಾಟಿಕ್<br>3. ಕಟುಕ<br>4. ಕಟುಗ<br>5. ಗುನಗಿ | ಪ್ರವರ್ಗ-2 (ಎ) ರಿಂದ ಪ್ರವರ್ಗ-1 ಕ್ಕೆ ಬದಲಾವಣೆ ಕುರಿತು. |

| | | | |
|---|---|---|---|
| 4 | ಶ್ರೀ ಹೆಚ್. ಕಾಂತರಾಜ ಅಧ್ಯಕ್ಷತೆಯಲ್ಲಿನ ನೇತೃತ್ವದ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಬಹಿರಂಗ ವಿಚಾರಣಾ ವರದಿ - 2018 | 1. ಮುದ್ದೆಗಂಬಾರ<br>2. ಬೈಟಕಂಬಾರ<br>3. ಕೊಂಡಕಮ್ಮಾರ<br>4. ಬಯಲು ಪತ್ತರ್<br>5. ಅಗಮುಡಿಯನ್<br>6. ಅಗಮುಡಿಯಾರ್<br>7. ಪೆಂಡಾರ/ಪೆಂಡಾರಿ<br>8. ಪೆಂಡಾರ ಮುಸ್ಲಿಂ<br>9. ಪಿಂಡಾರಿ (ಹಿಂದೂ)<br>10. ಪಿಂಡಾರಿ (ಮುಸ್ಲಿಂ)<br>11. ಬಾಗವಾನ<br>12. ಬಾಗಭಾನ<br>13. ಬಾಘಬಾನ<br>14. ಘ್ಯಾರೆ<br>15. ಪಂಗಡಗಾರ ನಾಯಕ<br>16. ಕೊಂಕಣಿ ಖಾರ್ವಿ<br>17. ಅಹಿರ ಗೌಳಿ/ ಅಹಿರ ಗವಳಿ<br>18. ಗೋಣಿಗ/ ಗೋಣಿಗಶೆಟ್ಟಿ/ ಗೋಣಿಗಚೆಟ್ಟಿ<br>19. 24 ಮನೆ ತೆಲುಗು ಚೆಟ್ಟಿ/ 24 ಮನೆ ತೆಲಂಗು ಚೆಟ್ಟಿಯಾರ್<br>20. ಸಾದು ಶೆಟ್ಟಿ/ ಸಾದು ಚೆಟ್ಟಿ/ಸಾಧು ಸೆಟ್ಟಿ/ ಸಾಧು ಶೆಟ್ಟಿ/ ಸಾಧು ಚೆಟ್ಟಿ<br>21. ಸಣಪರು/ ಸಣಪರ್/ಸಲಪರ್<br>22. ತೆಲುಗುಶೆಟ್ಟಿ/ತೆಲುಗುಸೆಟ್ಟಿ/ ತೆಲುಗು ಚೆಟ್ಟಿ / ತೆಲುಗು ಚೆಟ್ಟಿಯಾರ್ / ತೆಲಂಗುಚೆಟ್ಟಿ / ತೆಲುಂಗು ಚೆಟ್ಟಿ/ ತೆಲುಂಗು ಚೆಟ್ಟಿಯಾರ್<br>23. ಜನಪ್ಪ ಶೆಟ್ಟಿ/ ಜನಪಸೆಟ್ಟಿ / ಜನಪಚೆಟ್ಟಿ / ಜನಪರ್ | |

| | | | |
|---|---|---|---|
| | | 1. ಕಂಬಾರ<br>2. ಕಂಸಾಲ<br>3. ಕಮಸಾಲ್<br>4. ಲೋಹರ್<br>5. ಬೈಲುಕಮ್ಮಾರ<br>6. ಗೆಜ್ಜೆಗಾರ್/ ಗೆಜ್ಜೆಗಾರ<br>7. ಬಡಿಗಾರ್<br>8. ಬೈಲುಅಕ್ಕಸಾಲಿ<br>9. ಸವಿತಾ ಮತ್ತು ಇತರೆ ಸಮುದಾಯಗಳು<br>10. ಮಡಿವಾಳ | ಪ್ರವರ್ಗ-2 (ಎ) ರಿಂದ ಪ್ರವರ್ಗ-1 ಕ್ಕೆ ಬದಲಾವಣೆ ಕುರಿತು. |
| 5 | ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ ನೇತೃತ್ವದ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಪ್ರಥಮ ವರದಿ-2023, ದ್ವಿತಿಯ ವರದಿ-2023, ತೃತೀಯ ವರದಿ-2024 | 1. ಮುಖಾರಿ/ಮುವಾರಿ<br>2. ಪಂಬಲ<br>3. ಪೊಮ್ಮಲ | |
| | | 1. ಚಪ್ಪೇಗಾರ | ಪ್ರವರ್ಗ-2 (ಎ) ರಿಂದ ಪ್ರವರ್ಗ-1 ಕ್ಕೆ ಬದಲಾವಣೆ ಕುರಿತು. |